ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ,
ಸಿ.ಸಿ. ನಂ.ಃ 1544/2022

..........................................................................

CW 13
PW 05

| | | |
|---|---|---|
| ಹೆಸರು | ಃ | ಕಿರಣ ಹೊನ್ನಣವರ, |
| ತಂದೆಯ ಹೆಸರು | ಃ | ರಾಜೆಸಿಂಗ್ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ವೈದ್ಯಾಧಿಕಾರಿ |
| ವಾಸಸ್ಥಳ | ಃ | ಧಾರವಾಡ. |

ದಿನಾಂಕ 23-03-2026 ರಂದು ಸಾಕ್ಷಿಗೆ ಸತ್ಯಪ್ರತಿಜ್ಞೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನಾನು ಜೂನ್ 2021 ರಿಂದ ಜೂನ್ 2023ರ ವೆರೆಗೆ ಹಳಿಯಾಳಸರ್ಕಾರಿ ಆಸ್ಪತ್ರೆಯಲ್ಲಿವೈದ್ಯನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 13-10-2022 ರಂದು ಮಾರುತಿ ನಿಂಗಪ್ಪ ವಾಗ್ಮೊರ ರವರು ಬೆಳಗ್ಗೆ 08-30 ಗಂಟೆಗೆ ಅವರ ಸಹೋದರನ ಜೊತೆ ಆಸ್ಪತ್ರೆಗೆ ಬಂದಿದ್ದರು. ನಾನು ಅವರನ್ನು ಪರೀಕ್ಷಿಸಲಾಗಿ ಅವರ ಬಲಗೈ ಮಧ್ಯಭಾಗದಲ್ಲಿ ತೀವ್ರಸ್ವರೂಪದ ಗಾಯವಾಗಿ ರಕ್ತಸಾವ್ರವಾಗಿತ್ತು, ನಾನು ಪ್ರಾಥಮಿಕ ಚಿಕಿತ್ಸೆ ನೀಡಿ ಮೂಳೆ ಮುರಿತ ಕಂಡು ಬಂದ ಮೇರೆಗೆ ಅವರಿಗೆ ಮುಂದಿನ ಚಿಕಿತ್ಸೆಗೆ ಹೋಗುವಂತೆ ಹೇಳಿದೆನು. ಆದ್ದರಿಂದ ನಾನು ಅವರಿಗೆ ಆದ ಗಾಯಗಳು ತೀವ್ರಸ್ವರೂಪದ್ದು ಎಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ, ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು ನಿಪಿ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ 11 ಎ ಎಂದು ಗುರುತಿಸಲಾಯಿತು.

ಅದೇ ದಿನ ಕಲ್ಲಪ್ಪ ಸುರಕೋಡ ರವರು 08-50 ಕ್ಕೆ ಆಸ್ಪತ್ರೆಗೆ ಬಂದಿದ್ದರು ನಾನು ಅವರನ್ನು ಪರೀಕ್ಷಿಸಲಾಗಿ ಅವರಿಗೆ ತಲೆಯ ಮೇಲೆ laceration ಮತ್ತು ಬಲಗೈ ಮೇಲೆ ತೆರಚಿದ

ಗಾಯವಾಗಿತ್ತು. ನಾನು ಪ್ರಾಥಮಿಕ ಚಿಕಿತ್ಸೆ ನೀಡಿ ಅವರಿಗೆ ಆದ ಗಾಯಗಳು ಸಾದಾ ಸ್ವರೂಪದ್ದು ಎಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ, ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು ನಿಪಿ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ 12 ಎ ಎಂದು ಗುರುತಿಸಲಾಯಿತು. ನಾನು ಚಿಕಿತ್ಸೆ ನೀಡುವಾಗ ಅವರಿಬ್ಬರೂ ಸದರಿ ಗಾಯಗಳು ಅಪಘಾತದಿಂದ ಆಗಿವೆ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲು :** ಆರೋಪಿಯ ಪರ ಶ್ರೀಮತಿ ಆರ್ ಎಮ್ ಸಿ ವಕೀಲರಿಂದ.

ಒಬ್ಬ ಬೈಕ ಸವಾರ ವೇಗವಾಗಿ ಬೈಕ ಅನ್ನು ಚಲಾಯಿಸಿಕೊಂಡು ಹೋದಾಗ ಅಪಘಾತವಾದಾಗ ನಿಪಿ 11 ಮತ್ತು 12 ರಲ್ಲಿ ಹೇಳಿದ ರೀತಿಯ ಗಾಯಗಳು ಆಗುತ್ತವೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಮಾರುತಿ ನಿಂಗಪ್ಪ ವಾಗ್ಮೊರ್ರ ರವರಿಗೆ ಆದಂತಹ ಗಾಯ ಎರಡು ಗಟ್ಟಿಯಾದ ವಸ್ತುಗಳ ನಡುವೆ ಮನುಷ್ಯನ ಕೈ ಅಥವಾ ಕಾಲು ಸಿಲುಕಿದಾಗ ಆಗುತ್ತವೆ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.